## ‘ಶುಭೋದಯ ಕರ್ನಾಟಕ’ಕ್ಕೆ ನೂರು

ಚಂದನ ವಾಹಿನಿಯಲ್ಲಿ ಪ್ರತಿದಿನ ಬೆಳಿಗ್ಗೆ 7–9 ರವರೆಗೆ ಪ್ರಸಾರವಾಗುವ ‘ಶುಭೋದಯ ಕರ್ನಾಟಕ’ ಒಂದು ಅವಿಸ್ಮರಣೀಯ ಕಾರ್ಯಕ್ರಮ. ಕರ್ನಾಟಕದ ಮೂಲೆ ಮೂಲೆಗಳಿಂದ ವಿವಿಧ ಕ್ಷೇತ್ರಗಳ ಕನ್ನಡದ ಗಣ್ಯರನ್ನು ಕರೆಸಿ ಕನ್ನಡಿಗರಿಗೆ ಪರಿಚಯಿಸುತ್ತಿರುವುದು ಶ್ಲಾಘನೀಯ. ಕಲೆ, ಸಾಹಿತ್ಯ, ಸಂಗೀತ,ನಾಟಕ, ವಿಜ್ಞಾನ, ಔದ್ಯಮಿಕ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರ ಜೀವನದ ಒಳ ನೋಟವನ್ನು ಪರಿಚಯಿಸುತ್ತಿರುವುದರಿಂದ, ಜನಸಾಮಾನ್ಯರಿಗೆ ತಾವು ಯಾವ ರೀತಿ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂಬ ಅರಿವು ಮೂಡುವುದರಲ್ಲಿ ಸಂಶಯವೇ ಇಲ್ಲ. ಒಂದು ರೀತಿಯಲ್ಲಿ ಮ್ಯಾನೇಜ್ಮೆಂಟ್ ಗುರುಗಳು ನಡೆಸುವ ಕಮ್ಮಟಗಳಿಗೆ ಪರ್ಯಾಯವಾಗಿದೆ ಎಂದೇ ಹೇಳಬಹುದು.

ಇತ್ತೀಚೆಗೆ ಈ ಕಾರ್ಯಕ್ರಮ ನೂರು ಕಂತುಗಳನ್ನು ಪೂರೈಸಿದ್ದು ಅದರ ಪ್ರಸಾರ ವಿಶೇಷವಾಗಿತ್ತು.

–ಮಲ್ಲಿಕಾರ್ಜುನ ಎಂ., ಬೆಂಗಳೂರು

## ವಾರದ ಪತ್ರ
## ನೋಡಲಾಗದ ಹಿಂಸೆ

ಈಗೀಗ ಧಾರಾವಾಹಿಗಳಲ್ಲಿ ಇನ್ನೊಂದು ವಿಕೃತಿ ಆರಂಭವಾಗಿದೆ. ಅರಳಿದ ಹೂಗಳಂತೆ ಮನಸ್ಸಿಗೆ ಮುದ ನೀಡಬೇಕಾದ ಎಳೆಯ ಮಕ್ಕಳನ್ನು ಅಪಹರಿಸುವುದು, ಅವರಿಗೆ ಹಿಂಸೆ ನೀಡುವುದು, ಹೆದರಿಸುವುದು, ಅವರನ್ನು ಅಳಿಸುವುದು, ವಿಷ ಹಾಕುವಂತಹ ದುಷ್ಕಾರ್ಯಗಳನ್ನು ಮಾಡಲು ಅವರನ್ನು ಬಳಸಿಕೊಳ್ಳುವುದು. ಇಂತಹ ಹೇಯ ದೃಶ್ಯಗಳನ್ನು ಹೆಣೆಯುತ್ತಿರುವುದು ಸರ್ವಥಾ ಖಂಡನೀಯ. ಆ ಮಕ್ಕಳ ಎಳೆಯ ಮನಸ್ಸಿನಲ್ಲಿ ಅಳಿಸಲಾಗದ ಋಣಾತ್ಮಕ ಭಾವನೆಗಳನ್ನು ಊರುವ ಇಂತಹ ಕ್ಷುಲ್ಲಕ ಕಾರ್ಯವನ್ನು ನಿಲ್ಲಿಸಲೇಬೇಕು.

ಸಿನೆಮಾಗಳಲ್ಲಿ ಪ್ರಾಣಿ ಹಿಂಸೆಯನ್ನು ತೋರಿಸುವಂತಿಲ್ಲ. ಹಾಗೆ ಕಾನೂನೇ ಇದೆ. ಪ್ರಾಣಿಗಳಿಗಿರುವ ರಕ್ಷಣೆಯೂ ನಮ್ಮ ಎಳೆಯ ಮಕ್ಕಳಿಗಿಲ್ಲವಾಯಿತೇ? ಶಿಶು ಕಲ್ಯಾಣ ಇಲಾಖೆಯು ಈ ಕಡೆ ಗಮನ ಹರಿಸಿ ಇದನ್ನು ತಡೆಗಟ್ಟಬೇಕು. ಪೋಷಕರು ತಮ್ಮ ಮಕ್ಕಳು ಅಭಿನಯಿಸಬೇಕಾದ ದೃಶ್ಯಗಳನ್ನು ಮೊದಲೇ ಅರಿತು, ಇಂತಹ ದೃಶ್ಯಗಳಿದ್ದಲ್ಲಿ ಒಪ್ಪಿಗೆ ಕೊಡಬಾರದು. ಸಿಗುವ ದುಡ್ಡೋ, ಖ್ಯಾತಿಯೋ, ಮಕ್ಕಳ ಮಾನಸಿಕ ಆರೋಗ್ಯಕ್ಕಿಂತ ಹೆಚ್ಚಿನದಲ್ಲ.

–ಜಿ.ಮೃತ್ಯುಂಜಯ, ಬೆಂಗಳೂರು

## ಲೋಕಲ್ ಚಾನೆಲ್‌ಗಳ ಮೇಲುಗೈ?

ನಗರ ಮತ್ತು ದೊಡ್ಡ ಪಟ್ಟಣಗಳನ್ನು ಹೊರತುಪಡಿಸಿದರೆ, ಹಳ್ಳಿಗಳಲ್ಲಿ ಮತ್ತು ಸಣ್ಣಪುಟ್ಟ ಪಟ್ಟಣಗಳಲ್ಲಿ ಧಾರಾವಾಹಿ ಚಾನೆಲ್‌ಗಳನ್ನು ಬಿಟ್ಟರೆ, ಲೋಕಲ್ ಚಾನೆಲ್‌ಗಳದ್ದೇ ಪಾರುಪತ್ಯ. ಇಂದು ಪ್ರತಿ ಜಿಲ್ಲೆಯಲ್ಲೂ ಡಝನ್ ಗಟ್ಟಲೆ ಲೋಕಲ್ ಚಾನೆಲ್‌ಗಳು ಇದ್ದು, ಸ್ಥಳೀಯ ಕೇಬಲ್ ಆಪರೇಟರುಗಳು ಕಡಿಮೆ ದರದಲ್ಲಿ ಸಂಪರ್ಕವನ್ನು ಕೊಡುತ್ತಿದ್ದಾರೆ. ಈ ಚಾನೆಲ್‌ಗಳು ತಾಂತ್ರಿಕವಾಗಿಯೂ ಸಾಕಷ್ಟು ಮುಂದಿವೆ. ಸದ್ಯ ಅವು ಸ್ಥಳೀಯ ಕೇಬಲ್ ಆಪರೇಟರ್ಸ್ ಮತ್ತು ಯೂಟ್ಯೂಬ್ ಮೇಲೆ ಅವಲಂಬಿತವಾಗಿವೆ. ಅವು ಸ್ಥಳೀಯ ಸುದ್ದಿಗಳನ್ನು ನೀಡುವುದರೊಂದಿಗೆ ಚುಟುಕಾಗಿ ಇತರ ಸುದ್ದಿಗಳನ್ನೂ ಸ್ಥಳೀಯ ಭಾಷೆಯಲ್ಲಿ ನೀಡುತ್ತಿವೆ.

ಬೆಂಗಳೂರು ಮೂಲದ ಚಾನೆಲ್‌ಗಳು ಬಹುತೇಕ ಡಿಟಿಎಚ್ ಮೂಲಕ ಸಂಪರ್ಕ ಕೊಡುತ್ತಿದ್ದು, ಅವು ಹಳ್ಳಿ ಮತ್ತು ಸಣ್ಣ–ಪುಟ್ಟ ಪಟ್ಟಣಗಳಲ್ಲಿ ದುಬಾರಿ ಎನಿಸುತ್ತವೆ. ಅಕಸ್ಮಾತ್ ಈ ಲೋಕಲ್ ಚಾನೆಲ್‌ಗಳೂ ಧಾರಾವಾಹಿಗಳನ್ನು ನೀಡಲು ಆರಂಭಿಸಿದರೆ ಬೆಂಗಳೂರು ಮೂಲದ ಚಾನೆಲ್‌ಗಳು ಅಸ್ತಿತ್ವಕ್ಕಾಗಿ ತಿಣುಕಾಡಬೇಕಾಗುತ್ತದೆ. ಬೆಂಗಳೂರು ಮತ್ತು ದೊಡ್ಡ ನಗರಗಳ ಬದುಕನ್ನೇ ಕನ್ನಡಿಗರ ಬದುಕೆಂದು ಬಿಂಬಿಸುವ ಬೆಂಗಳೂರು ಮೂಲದ ಚಾನೆಲ್‌ಗಳ ದೌರ್ಬಲ್ಯವೇ ಇದಕ್ಕೆ ಕಾರಣ. ಇದರ ಸಂಗಡ ಆರ್ಥಿಕ ಲೆಕ್ಕಾಚಾರದ ಸಮೀಕರಣವೂ ಇರುತ್ತದೆ.

–ರಮಾನಂದ ಶರ್ಮಾ, ಬೆಂಗಳೂರು

## ಹಿರಿಯ ನಾಗರಿಕರಿಗೆ ಅವಮಾನ!

ಇತ್ತೀಚೆಗೆ ‘ಪ್ಯಾಟೆ ಹುಡುಗೀರ್ ಹಳ್ಳಿ ಲೈಫು’ ಶುರುವಾಗಿದೆಯಷ್ಟೆ! ಕಾರ್ಯಕ್ರಮ ಲಾಂಚ್ ಮಾಡುವಾಗಲೇ ವೀಕ್ಷಕರಿಗೆ ಕಸಿವಿಸಿ ಶುರುವಾಗಿದ್ದು ಸುಳ್ಳಲ್ಲ. ಹಿಂದೆಯೂ ಹಲವು ಸೀಸನ್‌ಗಳಲ್ಲಿ ಹಳ್ಳಿಯ ಜನರನ್ನು ಮನಸೋ ಇಚ್ಛೆ ಬಳಸಿಕೊಂಡಿದ್ದಲ್ಲದೇ ಅವರ ಮುಗ್ಧತೆಯನ್ನು ‘ಮೂರ್ಖತನ’ದಂತೆ ಬಿಂಬಿಸುತ್ತಿದ್ದರು. ಈ ಬಾರಿ ಲಾಂಚ್ ಮಾಡುವ ದಿನ ಒಬ್ಬ ಸ್ಪರ್ಧಿಯನ್ನು ವೇದಿಕೆಗೆ ಪರಿಚಯಿಸಲು ಒಬ್ಬರು ವಯೋವೃದ್ಧರಿಗೆ ಕೆಂಪು ಕಾಚಾ ತೊಡಿಸಿ ಕರೆತಂದಿದ್ದು ತೀರಾ ಅಕ್ಷಮ್ಯ. ‘ಹಿರಿಯ ನಾಗರಿಕರು, ಅವರಿಗೆ ಗೌರವ ನೀಡಬೇಕು’ ಅಂತೆಲ್ಲಾ ಮಾತನಾಡುವ ದೊಡ್ಡಜನರೇ ಈ ರೀತಿ ಕಾರ್ಯಕ್ರಮ ಮಾಡಿದರೆ ಹೇಗೆ?

–ಚಂದ್ರಿಕಾ ಜೆ., ಬೆಂಗಳೂರು

## ಕಿರು ತೆರೆಗೆ ಸೆನ್ಸಾರ್ ಮಂಡಳಿ ಇಲ್ಲವೇ?

ಕೆಲವಾರು ವರ್ಷಗಳ ಹಿಂದೆ ಕಿರುತೆರೆಯಲ್ಲಿ ಕ್ರೌರ್ಯ ಹಾಗೂ ಬೆಡ್‌ರೂಂ ದೃಶ್ಯಗಳನ್ನು ಪ್ರದರ್ಶಿಸುತ್ತಿರಲಿಲ್ಲ. ಹಾಗಾಗಿ ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ಧಾರಾವಾಹಿಗಳನ್ನು ನೋಡಿ ಆನಂದಿಸುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಆ ನಿಯಮಗಳೆಲ್ಲಾ ಗಾಳಿಗೆ ತೂರಿ ಹೋಗಿ ಎಲ್ಲಾ ವಾಹಿನಿಗಳಲ್ಲೂ ಕ್ರೌರ್ಯ ಹಾಗೂ ಬೆಡ್‌ರೂಂ ದೃಶ್ಯಗಳು ಸರ್ವೇ ಸಾಮಾನ್ಯವಾಗಿ ಹೋಗಿವೆ.

ಕಲರ್ಸ್ ಕನ್ನಡದ ‘ಸಿದ್ಧಾರ್ಥ ಮತ್ತು ಸನ್ನಿಧಿ’ಯ ಪ್ರೇಮ ನಿವೇದನೆಗಳು ಬೇಜಾರು ಹಿಡಿಸುವಷ್ಟು ಮಟ್ಟಿಗೆ ಪ್ರದರ್ಶನಗೊಂಡಿದ್ದವು. ಅವರ ಕುಟುಂಬದ ಕೆಲವಾರು ಘಟನೆಗಳಿಂದ ಅದು ಕಮ್ಮಿಯಾಯಿತು ಎನ್ನುವಷ್ಟರಲ್ಲಿ ಝೀ ವಾಹಿನಿಯ ‘ನಾಗಿಣಿ’ಯ ಅಮೃತ, ಅರ್ಜುನ್‌ರ ಪ್ರಥಮ ರಾತ್ರಿಯ ದೃಶ್ಯಗಳು ಕಿರಿಕಿರಿ ಎನಿಸುತ್ತಿವೆ.

ಈ ಸನ್ನಿವೇಶಗಳು ಒಂದೆರಡು ದಿನದಲ್ಲಿ ಮುಗಿಯುವುದೂ ಇಲ್ಲ, ಪ್ರಾಯಕ್ಕೆ ಬಂದ ಮಕ್ಕಳೊಡನೆ ಧಾರಾವಾಹಿಯ ವೀಕ್ಷಣೆ ಮುಜುಗರ ತರಿಸುತ್ತಿರುವುದು ಬೇಸರದ ವಿಷಯ. ಕಿರುತೆರೆಗೆ ಸೆನ್ಸಾರ್ ಮಂಡಳಿ ಇದ್ದರೆ ಇಂತಹ ದೃಶ್ಯಗಳಿಗೆ ಕತ್ತರಿ ಹಾಕಬಹುದಲ್ಲವೇ?

–ಪುಷ್ಪಾ ಎನ್.ಕೆ. ರಾವ್, ಉಡುಪಿ

## ಯಕ್ಷ ಪ್ರಶ್ನೆಗಳು!

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಧಾರಾವಾಹಿಗಳ ನಿರ್ಮಾಪಕರು ಹಾಗೂ ನಿರ್ದೇಶಕರಿಗೆ ನನ್ನ ಕೆಲವು ಪ್ರಶ್ನೆಗಳು.

‘ಶನಿ’ ಧಾರಾವಾಹಿಯಲ್ಲಿ ಶನಿ ದೊಡ್ಡವನಾಗುವುದು ಯಾವಾಗ? ಇನ್ನೆಷ್ಟು ದಿವಸ ಅವನು ಬಾಲಕನಾಗಿಯೇ ಇರುತ್ತಾನೆ? ರಾಧಾ– ರಮಣ ಧಾರಾವಾಹಿಯಲ್ಲಿ ವೀಕ್ಷಕರಿಗೆ ಅವನಿಯ ಮುಖದರ್ಶನವನ್ನು ಏಕೆ ಮಾಡಿಸುವುದಿಲ್ಲ? ಆಸ್ಪತ್ರೆಯ ಅವಳ ಕೋಣೆಯಲ್ಲಿ ಮಕ್ಕಳಾಟಿಕೆಯ ಒಂದು ಮರದ ಕುದುರೆ ಸದಾ ಓಲಾಡುತ್ತಿರುತ್ತದೆ. ಆ ಕುದುರೆಯನ್ನು ಅಲ್ಲಿ ಇರಿಸಿರುವುದಕ್ಕೆ ವಿಶೇಷ ಅರ್ಥವೇನಾದರೂ ಇದೆಯೇ? ಪದ್ಮಾವತಿ ಧಾರಾವಾಹಿಯಲ್ಲಿ ಸಾಮ್ರಾಟನ ತಾಯಿಯ ಪತಿ ಎಲ್ಲಿ? ಈವರೆಗೂ ಅವಳ ಪತಿಯನ್ನು ತೋರಿಸದಿರುವುದಕ್ಕೆ ವಿಶೇಷವಾದ ಕಾರಣವೇನಾದರೂ ಇದೆಯೇ? ತನ್ನ ಕನಸಿನಲ್ಲಿ ಸದಾ ಬರುವ ಕನ್ಯೆಯ ಪ್ರತ್ಯಕ್ಷ ಮುಖದರ್ಶನ ಸಾಮ್ರಾಟನಿಗೆ ರೆಸಾರ್ಟ್‌ನಲ್ಲಿ ಆದರೂ ಅವನೇಕೆ ಅವಳನ್ನು ಗುರುತಿಸುವುದಿಲ್ಲ?

–ಮುರಲೀಧರ ಕುಲಕರ್ಣಿ, ಬೀದರ್